# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್. 75/16-17.

ದಿನಾಂಕ : 26-10 -2016.

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರ |
|---|---|---|
| ಮಾಲತಿ<br>ಕೋಂ ಚಂದ್ರಶೇಖರ್,<br>ಹಾರಾಡಿ ಮನೆ, ಪುತ್ತೂರು ಕಸಬಾ ಗ್ರಾಮ,<br>ಪುತ್ತೂರು ತಾಲೂಕು ದ.ಕ.<br>(ನ್ಯಾಯವಾದಿ ಶ್ರೀ ಕೆ.ಆರ್.ಆಚಾರ್ಯ ) | -ಮತ್ತು- | ತಹಶೀಲ್ದಾರರು,<br>ಪುತ್ತೂರು ತಾಲೂಕು ದ.ಕ. |

**--**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಪುತ್ತೂರು ತಾಲೂಕು ಬನ್ನೂರು ಗ್ರಾಮದ ಎಂ.ಆರ್ 723/2004-05 ದಿನಾಂಕ 23-05-2005 ರಂತೆ ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಪುತ್ತೂರು ಕಸಬಾ ಗ್ರಾಮದ 100/1ಬಿ ಪೈಕಿ 0.13 ಎಕ್ರೆ ಜಮೀನನ್ನು ಪುತ್ತೂರು ಸ.ರಿ ಕಛೇರಿಯ ದ.ನಂ. ಬಿಕೆಐ 22/05-06 ದಿನಾಂಕ : 4-4-2005 ರ ಕ್ರಯಪತ್ರದಂತೆ ಮೇಲ್ಮನವಿದಾರರು ಆರ್ಜಿಸಿಕೊಂಡಿರುತ್ತಾರೆ. ಇತ್ತೀಚೆಗೆ ಸದ್ರಿ ಆಸ್ತಿಯ ಪಹಣಿಯನ್ನು ಪುತ್ತೂರು ತಹಸೀಲ್ದಾರರ ಕಚೇರಿಯಿಂದ ಪಡೆದು ಪರಿಶೀಲಿಸಿದಾಗ ಮೇಲ್ಮನವಿದಾರರ ಹೆಸರಿಗೆ ಪಹಣಿ ದಾಖಲಾಗದೇ ಇರುವುದು ಗಮನಕ್ಕೆ ಬಂಧಿರುವುದಾಗಿದೆ. ಇದಕ್ಕೆ ಸಂಬಂಧಿಸಿದ ಮ್ಯುಟೇಷನ್ ಆದೇಶದ ಪ್ರತಿಯನ್ನು ಪಡೆದುಕೊಂಡು ನೋಡಿದಾಗ ಮೇಲ್ಮನವಿದಾರರು ಕೃಷಿಕರೆಂಬ ಕುರಿತು ಹಾಗೂ ಅವರ ವಾರ್ಷಿಕ ಆದಾಯದ ಬಗ್ಗೆ ದಾಖಲೆಗಳನ್ನು ಒದಗಿಸದೇ ಇರುವುದರಿಂದ ಸದ್ರಿ ಎಂ.ಆರ್ 723/2004-05 ದಿನಾಂಕ 23-05-2005 ರಂತೆ ಮ್ಯುಟೇಶನ್ ತಿರಸ್ಕರಿಸಲಾಗಿರುವುದು ತಿಳಿದುಬಂದಿರುತ್ತದೆ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 20-7-2016 ರಂದು ಹಾಜರಾಗುವಂತೆ ನೋಟೀಸು ನೀಡಿ ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಅಪೀಲುದಾರರರು ನೋಂದಾಯಿತ ಕ್ರಯಪತ್ರದ ಆಧಾರದಲ್ಲಿ ಖಾತಾ ಬದಲಾವಣೆಯನ್ನು ಕೇಳುವುದಾಗಿದೆ. ಅಪೀಲುದಾರರು ಕೃಷಿಕರಾಗಿದ್ದು ಪುತ್ತೂರು ತಾಲೂಕು ಪುತ್ತೂರು ಕಸಬಾ ಗ್ರಾಮದ ಸ.ನಂಬ್ರ 100/6ಎ2ಎ1ಬಿ2(ಪಿ1)ರ ಖುಷ್ಕಿ 0.27 ಎಕ್ರೆ ಕೃಷಿ ಜಮೀನು ಹೊಂದಿದ್ದು ಕೃತಾವಳಿ ನಡೆಸಿ ಅನುಭವಿಸಿಕೊಂಡು ಬರುತ್ತಿರುವುದಾಗಿದೆ. ಈ ಭೂಮಿಯನ್ನು ಕ್ರಯವರಿಸುವ ಮೊದಲೇ ಅಪೀಲುದಾರರ ಗಂಡನಿಗೆ ಪುತ್ತೂರು ಸ.ರಿ. ಕಚೇರಿಯ ನೊಂದಾಯಿತ ಪಾಲುಪಟ್ಟಿ ದಸ್ತಾವೇಜು ಸಂಖ್ಯೆ 19/05-06ರಂತೆ ಕೃಷಿ ಭೂಮಿಯ ಹಕ್ಕು ಪ್ರಾಪ್ತವಾಗಿದ್ದು ಗಂಡ ಕೃಷಿಕನಾಗಿರುವುದರಿಂದ ಹೆಂಡತಿ ಕೂಡಾ ಕೃಷಿಕಳಾಗಿರುತ್ತಾರೆ. ಆದುದರಿಂದ ಪುತ್ತೂರು ಕಸಬಾ ಗ್ರಾಮದ 100/1ಬಿ ಪೈಕಿ 0.13 ಎಕ್ರೆ ಜಮೀನನ್ನು ಪುತ್ತೂರು ಸ.ರಿ ಕಛೇರಿಯ ದ.ನಂ. ಬಿಕೆಐ 22/05-06 ದಿನಾಂಕ : 4-4-2005 ರ ಪ್ರಕಾರ ಖಾತೆ ದಾಖಲಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ಹಾಗೂ ಮೇಲ್ಮನವಿದಾರರು ದಾಖಲೆಗಳನ್ನು ಪರಿಶೀಲಿಸಿದಾಗ ಪುತ್ತೂರು ಸ.ರಿ ಕಛೇರಿಯ ದ.ನಂ. ಬಿಕೆಐ 22/05-06 ದಿನಾಂಕ : 4-4-2005 ರ ಪ್ರಕಾರ ಖಾತೆ ಬದಲಾವಣೆ ಆಗಿರುವುದಿಲ್ಲ ಹಾಗೂ ಎಂ.ಆರ್ 723/2004-05 ದಿನಾಂಕ 23-05-2005 ರಂತೆ ಜಮೀನು ಕ್ರಯವರಿಸಿದವರು ಕೃಷಿಕರೆಂಬ ಬಗ್ಗೆ ದಾಖಲಾತಿ ಮತ್ತು ವಾರ್ಷಿಕ ಆದಾಯದ ದೃಢಪತ್ರ ನೀಡಿರುವುದಿಲ್ಲವೆಂಬ ಒಂದೇ ಕಾರಣಕ್ಕೆ ಹಕ್ಕು ದಾಖಲಾತಿ ದೃಢೀಕರಿಸದೇ ಇರುವುದು ಕಂಡು ಬರುತ್ತದೆ. ಆದರೆ ಈ ಪ್ರಕರಣದಲ್ಲಿ ಮೇಲ್ಮನವಿದಾರರಿಗೆ ಸದ್ರಿ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳುವಳಿಕೆ ಪತ್ರ ಹಾಗೂ ಸೂಕ್ತ ಕಾಲಾವಕಾಶ ನೀಡದಿರುವುದು ಕಂಡು ಬರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಿದೆ.

<u>ಆದೇಶ.</u>

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಪುತ್ತೂರು ಕಸಬಾ ಗ್ರಾಮದ 100/1ಬಿ ಪೈಕಿ 0.13 ಎಕ್ರೆ ಜಮೀನನ್ನು ಪುತ್ತೂರು ಸ.ರಿ ಕಛೇರಿಯ ದ.ನಂ. ಬಿಕೆಐ 22/05-06 ದಿನಾಂಕ : 4-4-2005 ರ ಕ್ರಯಪತ್ರದಂತೆ ಮೇಲ್ಮನವಿದಾರರ ಹೆಸರಿಗೆ ಖಾತೆ ಬದಲಾವಣೆ ಮಾಡುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಜರಗಿಸಲು ಹಾಗೂ ಈ ಪ್ರಕರಣದಲ್ಲಿ ಕರ್ನಾಟಕ ಭೂಸುಧಾರಣಾ ಕಾಯ್ದೆ 1961ರ ಕಲಂ79ಎ ಮತ್ತು 79ಬಿಯ ಉಲ್ಲಂಘನೆಯಾಗಿದ್ದಲ್ಲಿ ತನಿಖೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಪುತ್ತೂರು ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 26 -10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ, ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಕೆ.ಆರ್.ಆಚಾರ್ಯ ಬಿ.ಎನ್ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.